Reg No. M 1299
Daily & Weekly

For All Kinds of
Printing & Binding
The
Satyavadi
Press

SATYAVADI—Oldest Newspaper of Mysore

# ಸತ್ಯವಾದಿ

ಸಂಪುಟ 26 ಸಂಚಿಕೆ 327 ] ಗುರುವಾರ 8—7—1934 3 ಪೈ

ಹೆಚ್. ಆರ್. ಜಿ. ಸಿ. ಯವರ
ಶ್ರೀ ಪಿಕ್ಚರ್ಸ್
ತಯಾರಿಕೆ
ವಾಣಿ OR
[Violinist]
ಎಂಬ ಕನ್ನಡ ಸಾಮಾಜಿಕ ಚಿತ್ರ
ನಿಮ್ಮ ಮನರಂಜನೆಗಾಗಿ ಬೇಗನೆ ಬರಲಿದೆ

## ಹೊಸ ಹೊಸ ಸುದ್ದಿಗಳು

ಶ್ರೀಮತಿ ಸರೋಜಿನಿ ನಾಯ್ಡು ಅವರು ಸಿಂಗಪೂರಿಗೆ ಜಪಾನಿನಿಂದ ವಿಮಾನದಲ್ಲಿ ಬಂದರೆಂದು ಜೂಲೈ 2 ರಲ್ಲಿ ರಾಯಿಟರ್ ತಂತೀ ಕಳುಹಿಸಿರುತ್ತಾರೆ.

ರಷ್ಯಾದಲ್ಲಿದ್ದ ಜರ್ಮನ್ ಏಂಬಾಸ್ಸಿಡರ್ ಮಾರ್ಷಲ್ ಟಚ್‌ತ್‌ಸ್ಕೆ ವಿಮಾನದಳವನ್ನು ಇಟಲಿಗೆ ವರ್ಗಾಯಿಸಿದೆ.

ಟ್ರಾನ್ಸ್‌ವಾಲ್ ಇಂಡಿಯನ್ ಕಾಂಗ್ರೆಸ್ಸಿನವರು ಮಹಾತ್ಮಾ ಗಾಂಧಿಯವರ ಮಕ್ಕಳಾದ ಶ್ರೀಮತಿ ಮಣ್ಣಿಲಾಲ್ ಮೋಹನ್‌ದಾಸ್ ಗಾಂಧಿಯವರು ಇಂಡಿಯನ್ ಒಪಿನಿಯನ್ ಪತ್ರಿಕೆಯಲ್ಲಿ ಬರೆದ ಕೆಲವು ಲೇಖನಗಳ ಮೇಲೆ 2,000 ಪೌಂಡಿಗೆ ಮಾನನಷ್ಟ ದಾವ ಹೂಡಿರುತ್ತಾರೆ.

ಇಂಗ್ಲೆಂಡಿನಲ್ಲಿ ಒಟ್ಟೆಯ ಧಾರಣೆ ಯುದ್ಧ ಪ್ರಾರಂಭವಾಗುವುದಕ್ಕಿಂತ ಈಗ ಶೇಕಡ 70 ರಂತೆ ಹೆಚ್ಚಿದೆ. ಇಲ್ಲಿ ಗಜಕ್ಕೆ 0-2-6, 0-4-0 ಆಣೆ ಇದ್ದದ್ದು ಒಂದು ರೂಪಾಯಿಗೆ ಮಾರಿದೆ. ಹಿಂದಿನ ಯುದ್ಧದಲ್ಲಿ ಇಂಗ್ಲೆಂಡಿನಲ್ಲಿ ಶೇಕಡ 250 ರಂತೆ ಹೆಚ್ಚಿತ್ತು.

ರಷ್ಯಾದಲ್ಲಿ ಪ್ರಚಂಡ ಯುದ್ಧ ಪ್ರಾರಂಭವಾಗಿ ಜರ್ಮನ್ ಆಕ್ರಮಣಕ್ಕೆ ತೀವ್ರ ಪ್ರತಿಭಟನೆಯಾಗಿದೆ. ಓರೇಲ್ ಮತ್ತು ಖಾರ್ಕೋವ್ ಮಧ್ಯೆ ನಡೆಸುತ್ತಿರುವ ರಣರಂಗದಲ್ಲಿ, 10 ಸಾವಿರ ಜರ್ಮನರು ಹತರಾದರು.

ಬೆಜವಾಡ — ಗುಂತಕಲ್ ನಡುವೆ ಎಂ. ಎಸ್. ಎಂ. ರೈಲ್ವೆ ಅನಾಹುತದಲ್ಲಿ ಸತ್ತವರ ಸಂಖ್ಯೆ 20 ಕ್ಕೆ ಏರಿದೆ. ಗಾಯಗೊಂಡವರ ಸಂಖ್ಯೆ 58

ಶಾಂತಿ ಸಂಧಾನದ ಚರ್ಚೆಮಾಡುವ ಕಾಲವು ಇನ್ನೂ ಬಂದಿಲ್ಲವೆಂದು ರಷ್ಯಾದ ಪತ್ರಿಕೆಯೊಂದು ತಿಳಿಸಿದೆ.

ರೆಸೊ ಜಡ್ಜಿಗಳು ಇಂದೂರು ಮಹಾರಾಜರಿಗೆ ವಿವಾಹವಿಚ್ಛೇದಕ್ಕೆ ಅನುಮತಿ ಕೊಟ್ಟರು.

ಯುದ್ಧವು ಮುಗಿಯುವುದರೊಳಗಾಗಿ ಭಾರತವು ಒಗ್ಗಟ್ಟಿನಿಂದ ಪ್ರಬಲವಾದ ರಾಷ್ಟ್ರವಾಗದಿದ್ದ ಪಕ್ಷದಲ್ಲಿ ಯುದ್ಧಾನಂತರ ಪರಾಡಳಿತಕ್ಕೊಳಗಾಗಿ ಈಗಿನಂತೆಯೇ ಇರಬೇಕಾಗುತ್ತದೆಂದು ಮೈಸೂರಿನ ಮಾಜಿ ದಿವಾನರಾದ ಸರ್ ಅಲ್ಬಿಯನ್ ಬ್ಯಾನರ್ಜಿಯವರು ಬೆಂಗಳೂರಿನಲ್ಲಿ ಹೇಳಿದರು.

ಮಾಕೋಸಲ್ಲಿರುವ ಪೋರ್ಚುಗೀಸ್ ರವರು ತಮ್ಮ ಎಲ್ಲಾ ಆಯುಧಗಳನ್ನು ಜಪಾನಿಯರಿಗೆ ಕೊಟ್ಟು ಅದಕ್ಕೆ ಬದಲಾಗಿ ಆಹಾರ ಪದಾರ್ಥಗಳನ್ನು ತೆಗೆದುಕೊಂಡರು. ಮಾಕೋಗೆ ಹೋಗುವ ಎಲ್ಲಾ ರಸ್ತೆಗಳು ನಾಲೆಗಳು ಎಲ್ಲಾ ಬಂದು ಮಾಡಿರುತ್ತಾರೆ ಮಾಕೋಗೆ ಬೇಕಾದ ಆಹಾರ ಪದಾರ್ಥಗಳ ಹಡಗೋಟೆ ಈಗ ಜಪಾನಿಕೈಲಿದೆ. ಮಾಕೊ ಚೈನಾದಲ್ಲಿ ಪೊರ್ಚುಗೀಸರ ಕಾಲನಿ. ಇದು ಕ್ಯಾಂಟನ್ ನದಿ ಮುಖದ ದಕ್ಷಿಣದಲ್ಲಿದೆ. ಹಾಂಕಾಂಗಿಗೆ 40 ಮೈಲಿ ದೂರದಲ್ಲಿದೆ. ಇದರ ಜನರ ವೈಲಿ 100 1557 ರಿಂದ ಇಲ್ಲಿ ಪೋರ್ಚುಗೀಸರು ನೆಲೆಸಿರುವರು. ಈ ಜನರಿಗೆ ಮಾನು ಹಿಡಿಯುವುದೇ ಕೆಲಸ. ಸುಮಾರು ಎರಡು ಲಕ್ಷ ಪ್ರಜೆಗಳಿರುವುದು. ಇಲ್ಲಿರುವ ಒಂದರು ಪ್ರಸಿದ್ಧಿಯಾದದ್ದು. ರಾಜಧಾನಿಯಲ್ಲಿ 87 ಸಾವಿರ ಜನರು ವಾಸಮಾಡುವರು.

ರಷ್ಯಾದಲ್ಲಿದ್ದ ಜರ್ಮನ್ ಏಂಬಾಸ್ಸಿಡರ್ ಮಾರ್ಷಲ್ ಟಚ್‌ತ್‌ಸ್ಕೆ ವಿಮಾನದಳವನ್ನು ಇಟಲಿಗೆ ವರ್ಗಾಯಿಸಿದೆ.

ಮಾರ್ಟಿನಿಕ್ ದ್ವೀಪವು ವಿಷಿ ಸಂಬಂಧವನ್ನು ತ್ಯಜಿಸಿದೆ. ಸ್ವತಂತ್ರ ಫ್ರೆಂಚ್ ಪಕ್ಷಕ್ಕೆ ಸೇರಿದೆ. ಇಲ್ಲಿನ ಗೌರ್ನರರನ್ನು ಕೂಡಲೇ ನೇಮಕ ಮಾಡುವರು.

ಮಧುರೆ ಡಿಸ್ಟ್ರಿಕ್ಟಿನಲ್ಲಿ ಹೈಸ್ಕೂಲಿನ ಮೊದಲನೇ ಮೂರು ಫಾರಂಗಳಲ್ಲಿ ಹಿಂದಿಯನ್ನು ಬಲವಂತದಿಂದ ಪಾಠಹೇಳುವದನ್ನು ಈಗ ಮಾಡಿರುತ್ತಾರೆ.

ಕಳೆದ ಸೋಮವಾರ ಒಂದು ದಿವಸದಲ್ಲಿ ರಷ್ಯಾ ರಣರಂಗದಲ್ಲಿ ಜರ್ಮನಿಯರು ಸೇರಿ ಹತ್ತು ಸಾವಿರ ಮಾರಿ ಮೃತಪಟ್ಟರು.

ಸಂಸ್ಥಾನದ ರೈಲ್ವೆ ಮತ್ತು ಸಿ. ಐ. ಡಿ ಯ ಕಾಕ್ ಸ್ಪೆಬಲ್ ವೆಂಕಟಪ್ಪನು (ಸ್ವಂ. ಸು.)

## ಬೆಂಗಳೂರು ವಾರ್ತೆಗಳು

ಜೂ 7

ಇವತ್ತು ನುಧ್ಯಾಹ್ನ ಇಂಪೀರಿಯಲ್ ಕಂಪೆನಿ ಮಿಟಿಂಗು ನಡೆಯಿತು.

ಮೈಸೂರು ಸರಕಾರದವರು ಇವತ್ತು ಭಾರತ ರಕ್ಷಣಾ ಶಾಸನದ ನಿಯಮಾನುಸಾರವಾಗಿ ಇವತ್ತಿನಿಂದಲೇ ಸಂಸ್ಥಾನಾವಳಿಯಲ್ಲೆಲ್ಲಾ 'ರಿಂಗ್ ಟ್ರಾವಲರ್' ಎಂಬ ನೂಲು ಹತ್ತೋಟಿ ತರುವ ಕ್ರಮವನ್ನು ಜಾರಿಗೆ ತಂದಿದ್ದಾರೆ. ಇದರ ಮುಖ್ಯಾಧಿಕಾರಿಗಳು ಡೈರೆಕ್ಟರ್ ಆಫ್ ಕಾಮರ್ಸ್‌ರವರು. ಸೆಣಬು ಮತ್ತು ಹೆಮ್ಪು ಹೊರತು ಬಾಕಿ ಎಲ್ಲಾ ವಿಧದ ನೂಲಿಗೂ ಅನ್ವಯಿಸುತ್ತದೆಂದು ಪ್ರಕಟಿಸಿದ್ದಾರೆ. ನಿಯಮ ನಿಬಂಧನೆಗಳು ನಮೂದಿಸಲ್ಪಟ್ಟಿದೆ.

ಇವತ್ತು ಇಲ್ಲಿನ ಪತ್ರಿಕೋದ್ಯಮಿಗಳ ಕಛೇರಿಯಲ್ಲಿ ಪತ್ರಿಕಾ ಸಂಪಾದಕರು ಮತ್ತು ಯಜಮಾನರುಗಳ ಸಭೆಯು ಸಾಯಂಕಾಲ ೬॥ ಗಂಟೆಗೆ ಕೂಡಿ, ನ್ಯೂಸ್‌ಪ್ರಿಂಟ್ ಮತ್ತು ರೀಲ್ ವಿಚಾರ ಮಾತುಕತೆಗಳನ್ನು ನಡೆಸಿದರು. ರಾಜಧಾನಿಯ ಮೈಸೂರು ಪತ್ರಿಕಾ ಸಂಪಾದಕರೂ, ಮತ್ತು ಕತ್ಯವ್ಯಾಧಿಯ ವಿಶೇಷ ಪ್ರತಿನಿಧಿಗಳೂ ಈ ಸಭೆಗೆ ಬಂದಿದ್ದರು.

2 nd Week Extended

— EVENING SHOWS —
New Opera Talkies, From 2–7–43
BLOOD & SAND
A Super Technicolour Picture
Featuring Tyrone Power & Linda Darnell

Do not miss to see this thrilling picture, which is attracting a crowded house, all from the beginning.

# SATYAVADI

ಸಂಪುಟ 26, ಸಂಚಿಕೆ 93 ] **ಸೋಮವಾರ 1—2—1943** [ ಬಿಡಿಪ್ರತಿ 1 ಪೈ

## ಯೂರೋಪ್ ಮೇಲೆ ದಂಡಯಾತ್ರೆ

ಕಾಸಾಬ್ಲಾಂಕಾದ ಸಮ್ಮೇಳನದಲ್ಲಿ ಆದ ತೀರ್ಮಾನದಂತೆ 1943 ರಲ್ಲಿ ಯೂರೋಪಿನ ಮೇಲೆ ಮಿತ್ರಮಂಡಲಿಯವರ ದಂಡಯಾತ್ರೆಯು ಖಂಡಿತವೆಂದು ನ್ಯೂಸ್ ಕ್ರಾನಿಕಲ್ ಪತ್ರಿಕೆಯ ಸಮಾಲೋಚಕರ ಅಭಿಪ್ರಾಯ.

ಹೊಸ್ಪೆ ಶನಿವಾರಕ್ಕೆ ಹಿಟ್ಲರ್ ಅಧಿಕಾರಕ್ಕೆ ಒಂದು ಹತ್ತು ವರ್ಷವಾಯಿತು ಈ ಸಮಾರಂಭದಲ್ಲಿ ೨ ದಿವಸ ಬೆಳಿಗ್ಗೆ 11 ಗಂಟೆಗೆ ಗೋರಿಂಗ್, ಗೋಬೆಲ್ಸ್ ಭಾಷಣ ಮಾಡುತ್ತಾರೆಂದು ಗೊತ್ತಾಗಿದ್ದಿತು. ಆ ಸಮಯಕ್ಕೆ ಸರಿಯಾಗಿ ಆರ್. ಎ ಎಫ್. ವಿಮಾನಗಳು ಬರ್ಲಿನ್ ಮೇಲೆ ಧಾಳಿ ಮಾಡಿದವು. ಒಂದು ಗಂಟೆ ತಡವಾಯಿತು ಗೋರಿಂಗ್ ಭಾಷಣ ಮಾಡಬೇಕಾಯಿತು. ಡಾ || ಗೋಬೆಲ್ಸ್ ಭಾಷಣ ಮಾಡುವಾಗ ಸಹ ಆರ್. ಎ. ಎಫ್. ವಿಮಾನಗಳು ಧಾಳಿಮಾಡಿದವು.

ಮಿ || ಚರ್ಚಿಲ್ಲರಿಗೆ ಬಹಳ ಯೋಚನೆಯಾಗಿದೆ. ಇಂಗ್ಲೆಂಡಿನ ಜನರ ಬಹಳ ಕನ್ವಿಕ್ಷನ್ ಆಗಿದೆಯೆಂದು. ಇದಕ್ಕಾಗಿ ಹೆಚ್ಚು ಹೆಚ್ಚಾಗಿ ಮಕ್ಕಳಾಗುವವರಿಗೆ ಸರ್ಕಾರದ ಸಹಾಯ ಮಾಡಬೇಕೆಂದು. ಹೀಗೇಯಿದ್ದರೆ ಇನ್ನು ನೂರು ವರ್ಷಗಳಲ್ಲಿ ಕೇವಲ 40 ಲಕ್ಷ ಪ್ರಜೆಗಳು ಮಾತ್ರವಿರುವಂತೆ ! ಮಿ || ಚರ್ಚಿಯರಿಗೆ ಏಕೆ ಯೋಚನೆ? ಈ ಸಲವತ್ತು ಲಕ್ಷ ಪ್ರಜೆಗಳಿಗೆ ಇಂಡಿಯಾದಲ್ಲಿ ಸಲಭವಾಗಿ ಕೆಲಸ ಕೊಡಲಾಗುವುದಿಲ್ಲವೆ ?

ಹಿಟ್ಲರು ತನ್ನ ಪ್ರಜೆಗಳಿಗೆ ಕೊಟ್ಟಿರುವ ರಾಜಾಜ್ಞೆಯಲ್ಲಿ ಯುದ್ಧವು ಹೆಚ್ಚು ಕಾಲ ನಡೆಯುವುದೆಂದು ಸೂಚಿಸಿರುವನು.

ಸೈಬಾಬರ ಪೂಜೆ ಕಾಲದಲ್ಲಿ ಸಸ್ಯ

ಶ್ರೀ ಸತ್ಯಮೂರ್ತಿಯವರು ಪೂಜೆಯು ಕಳೆದ 7 ನೇ ತಾರೀಖಿನ ದಿವಸ ಕೊಯಮತ್ತೂರಿನಲ್ಲಿ ನಡೆಯಿತು. ಸಾಯಂಕಾಲ ೫ || ಗಂಟೆಗೆ ನಡೆದ ಭಜನೆಗೆ ಭಕ್ತಾದಿಗಳು ಬಂದಿದ್ದರು. ಭಜನೆ ನಡೆಯುತ್ತಿದೆ. ಒಂದು ಎರಡಡಿ ಉದ್ದದ ನಾಗರಹಾವು ಒಂದಿತು, ಕೆಲವರು ಗಾಬರಿಯಾದರು. ಹಾವು ಹೆಡೆಯೆತ್ತಿ ಯಾರೂ ಗಾಬರಿಯಾಗಬೇಡಿರೆಂದು, ಹೆಡೆಯನ್ನು ಈ ಕಡೆಯಿಂದ ಆ ಕಡೆಗೆ ಅಲ್ಲಾಡಿಸಿತು. ಭಜನೆ ರಾತ್ರಿ 9 ಗಂಟೆವರೆಗೂ ನಡೆಯಿತು ಹಾವು ಅಲ್ಲೇ ಇದ್ದು ಭಜನೆ ಕೇಳುತ್ತಿತ್ತು. ಯಾರೂ ಗಾಬರಿ ಪಡಲಿಲ್ಲ. ಭಕ್ತಾದಿಗಳೆಲ್ಲಾ 9 ಗಂಟೆಗೆ ಹೊರಟುಹೋದರು. ಮಂದಿರದವರು ರಾತ್ರಿಯೆಲ್ಲಾ ಭಜನೆ ಮಾಡುತ್ತಿದ್ದರು. ಹಾವು ಮಂದಿರದಲ್ಲೇ ಇತ್ತು. ಮರುದಿನ ಮಂದಿರವನ್ನು ದಾನಮಾಡಿದ ಶ್ರೀ ವರದರಾಜಯ್ಯನವರೂ ಇತರರೂ ಒಂದು ನಾಗಪ್ಪನಿಗೆ ಪೂಜೆ ಮಾಡಿದರು. ಹೆಡೆಯ ಮೇಲೆ ಹೂವಿನ ಸುರಿಮಳೆ. ನಾಗಪ್ಪನು ಹೆಡೆ ಬಗ್ಗಿಸಿ ಸ್ವೀಕರಿಸಿದನು. ಸುಮಾರು 9 ಗಂಟೆಗೆ ಮಂದಿರವನ್ನು ಸುತ್ತಿ ಕುಣಿಯುತ್ತಿತ್ತು. ಹಾವಿನ ಹತ್ತಿರ ಫ್ರೀಯರ್ ಫೋಟೋ ಇಟ್ಟು ಇದರ ಫೋಟೊತೆಗೆಸಿದರು, ಅದರ ಹತ್ತಿರ ಹಾಲನ್ನು ಇಟ್ಟರ. ಕುಡಿದು ಮಾಯವಾಯಿತು.

## ತಾಜಾ ಸಮಾಚಾರ

ಈಗ ಬೊಂಬಾಯಿನ ಟಂಕಶಾಲೆಯಲ್ಲಿ ಪ್ರತಿ ದಿವಸ 25 ಲಕ್ಷ ನಾಣ್ಯಗಳನ್ನು ತಯಾರ್ಮಾಡುವರು.

ಅಮೇರಿಕಾದಲ್ಲಿ ಯುದ್ಧ ಕೆಲಸದಲ್ಲಿ ತೊಡಗಿರುವ ಹೆಂಗಸರಿಗೂ, ಗಂಡಸರಿಗೆ ಕೊಡುವಷ್ಟೇ ಸಂಬಳ ಕೊಡುವುದು. ಯುದ್ಧ ಇಲಾಖೆಯವರಿಗೆ ಎಲ್ಲರೂ ಒಂದೆ.

ಮುಂಬೈನಲ್ಲಿ ಗೋಧಿ ಸಿಗುವುದು ದುರ್ಲಭವಾದ್ದರಿಂದ ಹಿಂದೂಗಳು ತರಕಾರಿಯನ್ನು ಏತಕ್ಕೆ ಹೆಚ್ಚಾಗಿ ತಿನ್ನಬಾರದೆಂದು ಆಂಗ್ಲೋಇಂಡಿಯನ್ ಪ್ರಮುಖರು ಹೇಳುತ್ತಾರಂತೆ ತರಕಾರಿ ಬೀದಿ ಗೋಧಿಗಿಂತ ಹೆಚ್ಚಿನ್ನವುದು ಅವರಿಗೆ ತಿಳಿದಿಲ್ಲ ; ಮತ್ತು ಸಿಕ್ಕುವುದೂ ಹಾಗಾಗ್ಗೆ !

ಬೊಂಬಾಯಿನಲ್ಲಿ ಸರ್ ಪುರುಷೋತ್ತಮದಾಸ್ ಥಾಕುರ್‌ದಾಸರವರು ಹಬ್ಬ ಮಾಡುವುದನ್ನು ಮಿತವ್ಯಯದಲ್ಲಿ ಮಾಡಬೇಕೆನ್ನುವರು, ಹೆಸರು, ತೊಗರಿ, ಕಡ್ಡಿ ಉದ್ದು ರೂಪಾಯಿಗೆ ಎರಡು ಸೇರಾಗಿರುವಾಗ, ಹಬ್ಬ ಮಾಡುವವರಾರು ? ಮದುವೆಯನ್ನು ಗಾಂಧರ್ವ ರೀತಿಯಲ್ಲಿ ಮಾಡಿದರಾಯಿತು !

### ಮೈಸೂರಿಗೆ ಆಗಮನ

ರಾಜಧಾನಿಗೆ ನ್ಯೂಯಾರ್ಕ್ ಟೈಮ್ಸ್ ಪತ್ರಿಕಾ ಪ್ರತಿನಿಧಿಗಳು ಆಗಮಿಸಿದರು. ೨

## ಹೊಸ ಸುದ್ದಿ

ಶ್ರೀ ಸತ್ಯಮೂರ್ತಿಯವರನ್ನು ಪಾಯಿಲೆ ನಿಮಿತ್ತ ನಿನ್ನೆ ದಿವಸ ಬಿಡುಗಡೆ ಮಾಡಿದರು.

ಕಲ್ಕತ್ತಾದಲ್ಲಿ ರೇಷ್ಮೆ ಪೆದ್ಧತಿ ಜಾರಿಗೆ ತರುವರೆಂದು ತಿಳಿಯಬಂದಿದೆ.

ಮಧ್ಯ ಟುನಿಸಿಯಾದಲ್ಲಿ ಅಪೇಕ್ಷಿತರಾದವರು ಹೆಚ್ಚಾಗಿ ನುಗ್ಗಲು ಆಗುತ್ತಿಲ್ಲ.

ಬೊಂಬಾಯಿನಲ್ಲಿ ಈಗ ಚಾರಿಯಲ್ಲಿರುವ ತೇಜಿಪಿಂಗ್ ಪದಾರ್ಥಗಳು—ಅಕ್ಕಿ ಜೀಜಲಿ, ಜೋಳ, ಸಕ್ಕರೆ ಮಾತ್ರ.

ಆಂಗ್ಲೇಯರು ಕೋಂಗ್‌ನಲ್ಲಿ ಧಾಳಿ ಮಾಡಿದಾಗ 12 ಸೆಕೆಂಡಿಗೆ ಒಂದರಂತೆ ಬಾಂಬು ಹಾಕಿದರು. ಅಲ್ಲಿ ಸುಮಾರು 250 ಕಾರ್ಖಾನೆಗಳು ನಿರ್ನಾಮವಾದವು.

ಕಪಟಕಿಯವನ್ನು ರಷ್ಯನರು ಹಿಡಿದಿರುವುದರಿಂದಲೂ, ರೈಲ್ವೆ ಮಾರ್ಗವನ್ನು ಕತ್ತರಿಸಿರುವುದರಿಂದಲೂ ರೋಸ್ಟಾಫ್‌ಗೆ ಜರ್ಮನರು ರೈಲು ಮುಖಾಂತರ ಓಡಾಡಲು ಆಗುವದಿಲ್ಲ. ರಸ್ಟಾಫ್ ಮೂರು ಕಡೆಯಿಂದ ರಷ್ಯನರಿಂದ ಮುತ್ತಲ್ಪಟ್ಟಿದೆ. ಕುಪಿಯಕ್ಸ್, ಕ್ಯಾಸಿಲಿಯಾನೆಕ್ಸನ್ನೂ ರಷ್ಯನರು ಹಿಡಿದಿರುವರು.

Founded 1917 ಸತ್ಯಮೇವ ಜಯತೆ Regd No. M 1299

# SATYAVADI

ಸಂಪುಟ 26 ಸಂಚಿಕೆ 94 ] **ಗುರುವಾರ 4—2—1943** [ ಬಿಡಿಪ್ರತಿ 1 ಪೈ

## ಇಂಡಿಯಾದ ಮೇಲೆ ದಂಡಯಾತ್ರೆಯಿಲ್ಲವೇ ?

ಜರ್ಮನಿಯ ಆಟ ಈ ವರ್ಷದಿಲ್ಲೇ ಮುಗಿಯುವುದು ; ನಾಜೀ ಪತನವಾದ ಒರದು ವರ್ಷದಲ್ಲಿ ಜಪಾನು ಫೈಸಲ್ಲಾಗುವುದು. ಇಂಡಿಯಾವು ಈಗ 2 ಮಿಲಿಯ ಸೈನ್ಯ ಜಮಾವಣೆ ಮಾಡಿದೆ ಮತ್ತು ಇನ್ನೂ 6 ಮಿಲಿಯ ದೊರೆವುದು. ಇಂಡಿಯಾಕ್ಕೆ ಜೈನಾದ ಮೇಲೆ ಸಹಾನುಭೂತಿಯಿದ್ದು, ಜಪಾನಿನ ವಿರುದ್ಧವಾಗಿರುವದನ್ನು ವ್ಯಕ್ತಪಡಿಸಿದೆ. ಆದುದರಿಂದ ಇಂಡಿಯಾ ಮೇಲೆ ದಂಡೆಯಾತ್ರೆಗೆ ಅವಕಾಶವಿಲ್ಲ— ಎಂದು ದಕ್ಷಿಣ ಆಫ್ರಿಕಾದಲ್ಲಿ ಇಂಡಿಯಾ ಹೈ ಕಮಿಷನರ್ ಸರ್ ಷಾಫತ್ ಅಹಮದ್ ಖಾನರು ತಿಳಿಸಿರುವರು.

■ ■ ■

### ಜೀವದಾನದ ಅರ್ಜಿ

ಈಸೂರು ನೊಖದ್ದನೆಯಲ್ಲಿ ಮರಣದಂಡನೆಗೆ ಗುರಿಯಾಗಿರುವವರಿಗೆ ಜೀವದಾನ ಮಾಡಬೇಕೆಂದು ಶ್ರೀಮನ್ಮಹಾರಾಜರವರಿಗೆ ಸಂಸ್ಥಾನದ ಅನೇಕ ಕಡೆಗಳಿಂದ 60 ಅರ್ಜಿಗಳು ಹೋಗಿರುವುವೆಂದೂ, ಇವಕ್ಕೆ 30 ಸಾವಿರಕ್ಕೆ ಮೇಲ್ಪಟ್ಟು ರುಜುಗಳು ಬಿದ್ದಿವೆಯೆಂದೂ ತಿಳಿಯಬಂದಿದೆ.

## ಯುದ್ಧವಾರ್ತೆ

ಸ್ಟಾಲಿನ್‌ಗ್ರಾಡಿನಲ್ಲಿ ತಮ್ಮ ಸೋಲನ್ನು ಈಗ ಜರ್ಮನರು ಒಪ್ಪಿಕೊಂಡಿರುತ್ತಾರೆ. ಸ್ಟಾಲಿನ್‌ಗ್ರಾಡಿನಲ್ಲಿ ಜರ್ಮನರ 6 ನೇ ದಳವು ನಿರ್ನಾಮವಾದುದರಿಂದ ಜರ್ಮನರು ಮೂರು ದಿನವೆ ವ್ಯಸನದಲ್ಲಿರಬೇಕೆಂದು ಗೋರಿಂಗಿನೆ ಆರ್ಡರ್ ಆಗಿದೆ.

ಇದುವರೆಗೆ ಸ್ಟಾಲಿನ್‌ಗ್ರಾಡ್ ಕದನದಲ್ಲಿ ಜರ್ಮನರು 3 ಲಕ್ಷಕ್ಕೆ ಮಿಕ್ಕಿ ಹತರಾಗಿರುತೆರೆಂದು ರಷ್ಯಾ ವಂದಿ.

ಉತ್ತರ ಆಫ್ರಿಕಾಕ್ಕೆ ಕನಡಾ ಸೈನ್ಯವು ಬಂದಿಳಿಯಿತು. ಇದು ಎರಡನೆಯ ಇದು ಇಲ್ಲಿಗೆ ಒಂದುದು.

ಆರ್. ಎ. ಎಫ್ ವಿಮಾನಗಳು [redacted] ನ್ನೆ ಬೆಲ್ಜಿಯಂ ಮೇಲೆ ಧಾಳಿಮಾಡಿದಾಗ ಇವನ್ನು ಎದುರಿಸಲು ಜರ್ಮನರ ಒಂದು ವಿಮಾನವೂ ಕಾಣಿಸಿಕೊಳ್ಳಲಿಲ್ಲ.

ಜರ್ಮನರು ಫೂಲೆಂಡಿನಲ್ಲಿ ಸಿಗ್‌ಫ್ರೈಡ್ ಎಂಬ ಬಲವಾದ ಕೋಟೆಯನ್ನು ಕಟ್ಟುವರಂತೆ.

ದಕ್ಷಿಣ ಆಫ್ರಿಕಾದಿಂದ ಈವರೆಗೆ 260ಕೋಟಿ ರೂಪಾಯಿನಷ್ಟು ಯುದ್ಧದ ಸಾಮಗ್ರಿಯನ್ನು ರಫ್ತುಮಾಡಿರುವರು.

## ಮುಖ್ಯ ವರ್ತಮಾನಗಳು

ಕಲ್ಕತ್ತಾದಲ್ಲಿ ಜಿಲ್ಲಿರೆ ಆಫಾವದಿಂದ ಸ್ಯಾಂ ಕಂಪೆನಿಯವರು 9 ಕಾಸು, 1 ಆಣೆ 1 ಆ. 3 ಪೈ ಕೂಪರ್ ಪುಸ್ತಕವನ್ನು ಆಚರಣೆಗೆ ತಂದಿರುತ್ತಾರೆ. ಇಂಥಾ ಪುಸ್ತಕ ಕೊಳ್ಳುವವರಿಗೆ ಕಮಿಷ್ಟ ಕೊಡುತ್ತಾರೆ. ಇಲ್ಲಿಯೂ ಹೋಟಲಿನವರು ಆದರಂತೆ ಏತಕ್ಕೆ ಮಾಡಬಾರದು ?

ಈ ವರ್ಷ ಅಂತ್ಯದಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನದ ನೌಕಾ ಬಲವು 22,2 000 ಟ್ಯಾಗಳಿಗೆ ಏರುವುದೆಂತೆ

ಆಲಿಘಡದ ವಿಶ್ವವಿದ್ಯಾಸಿಲಯದವರು ವಿಮಾನ ನಡೆಸುವ ಶಿಕ್ಷಣ ಕೊಡುವರು.

ಚೈನೀಶರ ಕಾರ್ಯ ಸ್ವಾಂತದಲ್ಲಿ ಬಹಳ ಗಣಿಗಳು ದೊರೆತಿವೆ. ಹೆಚ್ಚು ಪ್ರಮಾಣದಲ್ಲಿ ಹಿಂದೂಸ್ಥಾನದಲ್ಲಿಯೂ ಸಹ ಬಹಳ ಯು ಸಿಗಬಹುದೆಂದು ಸರ್ವೆ ಅಧಿಕಾರಿಗಳು ತಿಳಿಸಿರುವರು.

ಕಾರ್ ಪುರದ ಸಮೀಪ ಒಂದು ದೇವಾಲಯವಿದೆ ಅದರಲ್ಲಿ ಕ್ಯಾಪ್ಟನ್ ಸ್ಕಾಟ್ ಮತ್ತು ಆತನ ಸಹಚರ ವಿಗ್ರಹಗಳಿವೆ.

ಪಾಕಿಸ್ಥಾನ ವಿಷಯವು ದಕ್ಷಿಣ ಆಫ್ರಿಕಾಕ್ಕೂ ಸಂಬಂಧಿಸಿರುವುದೆಂದು ಡರ್ಬನ್ನಿನಲ್ಲಿ ನಡೆದ ಜಿನ್ನಾರವರ ಜನ್ಮದಿನ ಮಹೋತ್ಸವದಲ್ಲಿ ಈ ವಿಷಯವು ಪ್ರಮುಖ ಸ್ಥಾನಕ್ಕೆ ಒಂದಿದೆಯೆಂದು ಸೋಷಿಯಲ್ ವೆಲ್‌ಫೇರ್ ಪತ್ರಿಕೆಯು ತಿಳಿಸುತ್ತದೆ.

## ಯುದ್ಧದ ಖರ್ಚು

ಯುದ್ಧದ ಖರ್ಚು ಗಂಟೆಗೆ ಎಷ್ಟಾಗುತ್ತದೆ ಎಂಬುದು ನಿಮಗೆ ತಿಳಿದಿದೆಯೆ ? ಒಂದು ಗಂಟೆಗೆ 14000000 ರೂಪಾಯಿಗಳಾಗುವುದು. ಹಿಂದಿನ ಮಹಾಯುದ್ಧಕ್ಕೆ 51800000000 ರೂಪಾಯಿಗಳು ಖರ್ಚಾದವು ಈಗಿನ ಯುದ್ಧವು ಹಿಂದಿನ ಯುದ್ಧಕ್ಕಿಂತ ಖರ್ಚಿನಲ್ಲಿ ಏರಿದೆ ಹಿಂದೆ ಜರ್ಮನಿಯು 108300000009 ರೂ. ಗಳನ್ನು ಖರ್ಚುಮಾಡಿತು ಇಂಗ್ಲೆಂಡು ಖರ್ಚುಮಾಡಿದ್ದು 1069000000, ಫ್ರಾನ್ಸ್ 728000000 00. ಅಮೇರಿಕಾ 61000000000 ರೂ. ಗಳು. ಮನುಷ್ಯ ಒಬ್ಬ ಎಪಾರಂಗೊಕ್ಕರ 100 ರೂಪಾಯಿ ಖರ್ಚಾಗುತ್ತದೆ ಎಂದು ಇಟ್ಟುಕೊಂಡರೆ, ಇದರಲ್ಲಿ ಅವನ ಸಂಬಳಕ್ಕೆ ಒಟ್ಟಿಗೆ 13 ರೂಪಾಯಿ. ಊಟಕ್ಕೆ 44 ರೂ ಮದ್ದುಗುಂಡಿಗೆ 29 ರೂ. ವಿಮಾನಕ್ಕೆ 6 ರೂ. ಇಂಜನಿಯರಿಗೆ ರೂ 4, ಔಷಧಿಗೆ ರೂ 2, ಇತರ ಖರ್ಚಿಗೆ ರೂ 2, ಆಗುವುದು. ಹಿಂದಿನ ಯುದ್ಧದಲ್ಲಿ 650 ಲಕ್ಷ ಜನರು ಯುದ್ಧದಲ್ಲಿ ಕಾದಾಡಿದರು. ರಣರಂಗಕ್ಕೆ ರೂ 120 ಲಕ್ಷ. ರಷ್ಯಾದವರು 110 ಲಕ್ಷ, ಜರ್ಮನಿಯವರು 89 ಲಕ್ಷ, ಇಂಗ್ಲೀಷರು 84 ಲಕ್ಷ, ಫ್ರಾನ್ಸಿನವರು 78 ಲಕ್ಷ. ಆಸ್ಟ್ರಿಯಾದವರು. ಕೇವಲ 19 ತಿಂಗಳಿಗೆ ಅಮೇರಿಕಾದವರು ಯುದ್ಧದಲ್ಲಿ ಭಾಗವಹಿಸಿ 42 ಲಕ್ಷ ಜನರನ್ನು ಕಳುಹಿಸಿದ್ದರು.

( ಮುಂದುವರಿಯುವುದು

ಅಮೇರಿಕಾದಲ್ಲಿ ಇಂಡಿಯಾದ ಏಜೆಂಟ್-ಜನರಲ್ಲಾಗಿರುವ ಸರ್ ಜಿ. ಎಸ್. ಬಾಜಪೈರವರಿಗೆ ಒಂದು ಪತ್ರಿಕೆಯವರು 'ನ್ಯೂಸ್ ವೀಕ್ಲಿ ) ಈ ರೀತಿ ಟೆಲಿಫೋನ್ ಮಾಡಿದರು— ' ಜೆ. ಜೆ. ಸಿಂಗ್ ಎಂಬ ಇಂಡಿಯಾ ಲೀಸ್ ಸೆಕ್ರಿಟರಿಯವರು ಬ್ರಿಟಿಷ್ ಇಂಡಿಯಾ ಸರ್ಕಾರಕ್ಕೆ ಸೇರಿದವರೇ ?ಸರ್ ಬಾಜಪೈ ಮನಸ್ಸಿಯಲ್ಲಿರಲಿಲ್ಲ. ಅವರ ಇಂಗ್ಲೆಂಡಿನಲ್ಲಿ ಓದಿದ ಮಗನು ' ಓಹೊ ಇಲ್ಲ, ಮಿ|| ಸಿಂಗರು ಹಿಂದೂಸ್ಥಾನದ ಪ್ರಜೆಗಳ ಪ್ರತಿನಿಧಿಯು ' ಎಂದು ಫೋನಿನಲ್ಲಿ ಉತ್ತರವಿತ್ತರು

ಜನವರಿ 6 ರಲ್ಲಿ ಜಪಾನೀಯರು ಚೈನಾದಲ್ಲಿ ವಿಷವಾಯುವನ್ನು ಪ್ರಯೋಗಿಸಿದರು; ಗಾಳಿಯು ವ್ಯತಿರಿಕ್ತವಾಗಿ ಬೀಸಲು ನೂರಾರು ಜಪಾನೀಯರೇ ಸತ್ತರು.


ಅಪರ

ಕುನ್ನಾರ್ ಬಾಸ್

For Invigorating Coffee & Tea

**Sastry's Coffee Rooms**

Chamarajapuram, Myaore

ಮಂಗಳೂರು ಗಣಪತಿ, ಸುವರ್ಣಾ ಸ್ಪೆಷಲ್, ಗಜಾನನ ಬ್ರಿಡಿಗಳನ್ನೇ ಉಪಯೋಗಿಸಿ

**ಪಿ. ಮಂಜಪ್ಪ,** ಜೀಡಿ ಮರ್ಚೆಂಟ್

ಹಳೇ ಅಗ್ರಹಾರ, ಮೈಸೂರು.

**HOTEL PARADISE**

D. Subbiah Road, Mysore paovides you with comfortable and homely meals

ಶ್ರೀದೇವಿ ಆರ್ಟ್ಸ್

ಅಂದವಾದ ಬೋರ್ಡುಗಳು ಬರೆಯಲ್ಪಡುತ್ತವೆ. ಎಲ್ಲಾ ತರಹದ ಚಿತ್ರಕೆಲಸಗಳೂ ಮಾಡಲ್ಪಡುತ್ತವೆ ಸುಲಭ ದರಗಳು. 348 ಚಾಮರಾಜರೋಡ್, ಮೈಸೂರು


Edited, Printed & pnblished by M. S. Krishna Rao, at the Satyavadi P r e s s. Chamaraja Agrahar, Mysore.



ಗಾಂಧಿಯವರೇ ಇಂಡಿಯಾ ದೇಶದ ನಾಯಕರೆಂಬುದಾಗಿ ಲಿಲ್ಲಿಂಗ್‌ಹ್ಯಾಮಿನ ಬಿಷಪ್ ರವರು ಹೇಳುತ್ತಾರೆ.

ಈಗ ಇಂಗ್ಲೆಂಡಿನಲ್ಲಿ ತಲೆಗಂದಾಯವು ವರ್ಷಕ್ಕೆ ಒಬ್ಬರಿಗೆ ರೂ. 670 ಆಂತೆ.

' ಇಂಡಿಯಾಕ್ಕೆ ಸ್ವಾತಂತ್ರ್ಯ ಕೊಡುತ್ತೇನೆಂದು 1917 ರಲ್ಲಿ ಹೇಳಿದರು. ಯುದ್ಧ ಮುಗಿದರೂ ಸ್ವಾತಂತ್ರ್ಯ ಕೊಡಲಿಲ್ಲ. ಇಂಡಿಯಾಕ್ಕೆ ಆಂಗ್ಲೇಯರಲ್ಲಿ ನಂಬಿಕೆಯಿಲ್ಲ : ಆದ್ದರಿಂದ ಯುದ್ಧ ಮುಗಿದ ನಂತರ ಎಂದುಬಿಟ್ಟು, ಈಗಲೇ ಸ್ವಾತಂತ್ರ್ಯ ಕೊಟ್ಟರೆ ಆಂಗ್ಲೇಯರಲ್ಲಿ ನಂಬಿಕೆ ಹುಟ್ಟುವುದು, ಎಂದು ಸರ್ ಎಚ್. ಎಸ್. ಗೌರ್‌ರವರು ಲಂಡನ್ನಿನಲ್ಲಿ ಹೇಳಿದರು.


ನಮ್ಮ ಊರಿನ ಮೆಜೆಸ್ಟಿಕ ಚಲನ ಚಿತ್ರ ಮಂದಿರಗಳಲ್ಲಿ ಎಷ್ಟುರುನೋಡಿ

— ಹೆಚ್ ಆರ್. ಜಿ. ಸಿ. ಯವರ —

ಶ್ರೀ ರಿಚರ್ಡ್ಸ್

ಗಾಂಧಿಸ್ಕೆವರ್, ಮೈಸೂರು ಇವರ ಸಂಗೀತರತ್ನ ಆಸ್ಥಾನ ವಿದ್ವಾನ್ ಟಿ. ಚೌಡಯ್ಯನವರು, ಕಲ್ಚರ್ಡ್ ಕಮೆಡಿಯಿಕೆ ಪಿರಣ್ಣಯ್ಯನವರು ಅಭಿನಯಿಸಿರುವ

**ವಾಣಿ or (VIOLINIST)**


## ವಿವಿಧ ವಿಷಯ

ಇಂಗ್ಲೆಂಡಿನಲ್ಲಿ ಮಿ ||ಚರ್ಚಿಲ್ಲರವನ್ನು ಬಿಟ್ಟರೆ, ಸರ್ ಕ್ರಿಪ್ಸ್‌ರವರೇ ಜನರ ವಿಶ್ವಾಸಕ್ಕೆ ಪಾತ್ರರಾಗಿರುವುದು,

ಜನರಲ್ ಚಿಯಾಂಗ್ ಕೈಷೇಕರು ' ಚೈನಾದ ಅದೃಷ್ಟ ' ಎಂಬ 10000 ಪದಗಳಿಂದ ಕೂಡಿದ ಪುಸ್ತಕವನ್ನು ಮಾರ್ಚ್ 12 ಕ್ಕೆ ಪ್ರಕಟಿಸುವರಂತೆ.

ತುರ್ಕಿಯು ಪ್ರಸಿಡೆಂಟರೂ, ಮಿ || ಚರ್ಚಿಲ್ಲರೂ ಮಾತುಕತೆ ನಡೆಸಿದ್ದಕ್ಕಾಗಿ ನಮ್ಮ ಚಕ್ರವರ್ತಿಯವರು ಕಳುಹಿಸಿದ ತಂತೀವಾರ್ತೆಗೆ. ತುರ್ಕಿ ಪ್ರೆಸಿಡೆಂಟರು ವಂದನೆಯನ್ನು ಕಳುಹಿಸಿರುತ್ತಾರೆ.

ತುರ್ಕಿಗೂ ಜರ್ಮನಿಗೂ ವ್ಯಾಪಾರ ಕರಾರಾದರೂ. ತುರ್ಕಿಯಿಂದ ಕ್ರೋಂ ಕೊಟ್ಟರೂ, ಇದುವರಿಗೆ ಯಾವ ಯಂತ್ರ ಸಾಮಗ್ರಿಯನ್ನೂ ಜರ್ಮನರು ಕಳುಹಿಸಿಲ್ಲವೆಂದು ಇಂಡಿಯಾಕ್ಕೆ ಬಂದಿರುವ ತುರ್ಕಿಯ ಮಿ ಅಟಿಯವರು ಹೇಳಿದ್ದಾರೆ.

ಹಿಂದೂಸ್ಥಾನದ ನಾಯಕರ ಸಂಗಡ ಮಾತುಕತೆ ನಡೆಸಿ, ಎಂದು ಲಂಡನ್ನಿನಲ್ಲಿಯ ಸಭೆಯೊಂದರಲ್ಲಿ ತೀರ್ಮಾನವಾಯಿತು.

## ಕ್ಯಾಪ್ಟನ್ನನ ಯುಕ್ತಿ

1772 ರಲ್ಲಿ ಕ್ಯಾಪ್ಟನ್ ಕಾಮಕ್ ಜೋಟಾನಾಗಪುರದ ರಾಜನ ಪಟ್ಟಣಕ್ಕೆ ದಂಡು ಸಮೇತ ಸುಗ್ಗಿ, ರಾಜನು ವರ್ಷಕ್ಕೆ 3 ಸಾವಿರ ರೂಪಾಯಿ ಪೊಗದಿ ಮತ್ತು ಆಂಗ್ಲೇಯರು ಮಂಡಾಟಿಯವರೆಗೆ ಹೂಡಿರುವ ಯುದ್ಧಕ್ಕೆ ಸೈನ್ಯ ಕಳುಹಿಸಬೇಕೆಂದೂ ತಿಳಿಸಿ ರಾಜೆಮಾಡಿಕೊಂಡನು. ತನಗೆ ಈ ಕೈವಾಡದಲ್ಲಿ ಏನೂ ಸಿಕ್ಕಿಸಿರಲು, ಒಂದು ಉಪಾಯ ಹೂಡಿ, ರಾಜನ ಒಪ್ಪು ಬೆಲೆಯ ರುಮಾಲನ್ನು ಪಡೆದನು, ಈ ರುಮಾಲಿನಲ್ಲಿ ಸಾಮಸಾರು ವಜ್ರಗಳು ಜೋಡಿಸಿದ್ದವು.

### ಸೂಚನೆ

ನಾಳೆಯ ದಿನದ ಪತ್ರಿಕೆಯು ಪ್ರಕಟಿಸಲ್ಪಡುವುದಿಲ್ಲ. ಶನಿವಾರದ ಸಂಚಿಕೆಯಲ್ಲಿ ಹೆಚ್ಚು ವಿಷಯಗಳೂ ಪ್ರಕಟಿಸಲ್ಪಡುವುದು.

### ಕಂಪಾಜಿಟರು ಬೇಕಾಗಿದ್ದಾರೆ

ಪ್ರತಿದಿನ ಕಲವು ಗಂಟೆಗಳು ಕಾಲ ಕೆಲಸ ಮಾಡಬಲ್ಲ ಇಬ್ಬರು ಕಂಪಾಜಿಟರುಗಳು ಕೂಡಲೇ ಬೇಕಾಗಿದ್ದಾರೆ. ಹೆಚ್ಚು ವಿಷಯಗಳನ್ನು ಆಫೀಸಿನಲ್ಲಿ ವಿಚಾರಿಸಿ ತಿಳಿಯಬಹುದು.

ಮ್ಯಾನೇಜರ್, ಸತ್ಯವಾದಿ ಆಫೀಸ್
ಮೈಸೂರು


For good printing

**Saraswati Printing Press**

Lansdowne Buildings, Mysore

**Lakshminarasimha Press**

Srirampet, Mysore

ಅಪರ

ಯಾದ್

ಮಂಗಳೂರು ಗಣಪತಿ, ಸುವರ್ಣಾ ಸ್ಪೆಷಲ್, ಗಜಾನನ ಬ್ರಿಡಿಗಳನ್ನೇ ಉಪಯೋಗಿಸಿ

**ಪಿ. ಮಂಜಪ್ಪ,** ಜೀಡಿ ಮರ್ಚೆಂಟ್

ಹಳೇ ಅಗ್ರಹಾರ, ಮೈಸೂರು.

ಶ್ರೀದೇವಿ ಆರ್ಟ್ಸ್

ಅಂದವಾದ ಬೋರ್ಡುಗಳು ಬರೆಯಲ್ಪಡುತ್ತವೆ. ಎಲ್ಲಾ ತರಹದ ಚಿತ್ರಕೆಲಸಗಳೂ ಮಾಡಲ್ಪಡುತ್ತವೆ ಸುಲಭ ದರಗಳು. 348 ಚಾಮರಾಜರೋಡ್, ಮೈಸೂರು


Edited, Printed & pnblished by M. S. Krishna Rao, at the Satyavadi P r e s s. Chamaraja Agrahar, Mysore.

" ಸತ್ಯವಾದಿ " ಚಂದಾದಾರರಾಗಿರಿ.

Founded 1917 ಸತ್ಯವಾದಿ Regd No. M 1299

# SATYAVADI

ಸಂಪುಟ 2 ಸಂಖ್ಯೆ 94 ] ಮಂಗಳವಾರ 2—2—1943 [ ಬಿಡಿಪ್ರತಿ 1 ಕ್ಕೆ

## ಸಂಪಾದಕರ ಅರ್ಜಿ ವಜಾ

ಬೆಂಗಳೂರಿನ ಶ್ರೀ ಪಿ. ಆರ್. ಥಾನುಯ್ಯ ಮುಂತಾದ ಸಂಪಾದಕರು ಅವರ ವೈಟ್‌ಲಿನ ವೊಳಸ್ಟ್ ಮೆಯ್ಯಲ್ಲಿ ಸಿಟಿ ಮ್ಯಾಜಿಸ್ಟ್ರೇಟರು ಮಾಡಿದ್ದ ಭಾರ್ಜಿನ್ನು ವಜಾ ಮಾಡಿಕೊಡಬೇಕೆಂದು ಹೈ ಕೋರ್ಟಿಗೆ ಹಾಕಿಕೊಂಡಿದ್ದ ರಿಸಿಸ್ಟ್ ಅರ್ಜಿಯನ್ನು, ಚೀಫ್ ಜಸ್ಟಿಸ್ ಸರ್ ಲೈಲಿಯವರು ( ತಮ್ಮ ಮತ್ತು ಮಾ || ಜಸ್ಟಿಸ್ ಸುಬ್ರಹ್ಮಣ್ಯ ಅಯ್ಯರ್ ಅವರ ಪರ ) ವಜಾಮಾಡಿರೆವರು.

**ಚಿಕ್ಕರ ಪ್ರಕರಣ**— ನಾಗಾಂಗ್, ಜಾನ್ಸಿ, ಟಾಡ್‌ಪದ್ರಿ, ಪಾಲಂಕೋಟೆ ಸೈಡಾಪೇಟೆಗಳಲ್ಲಿ ಅನೇಕ ಕಡೆ ಪೋಲೀಸಿನವರು ಜತ್ತಿನಾಡಿ ಪೇರಳವಾದ ಚಿಲ್ಲರೆ ಶೇಖರಣಗಳನ್ನು ಪತ್ತೆ ಮಾಡಿ ವಶಪಡಿಸಿಕೊಂಡು, ಕೆಲವು ಕಡೆ ಈ ಸಂದರ್ಭದಲ್ಲಿ ಮೊಕದ್ದಮೆ ಹೂಡಿದ್ದಾರೆಂದು ತಿಳಿಯಬರುತ್ತದೆ.

**ಇಪ್ಪಲು ಶೇಖರಣ**— ಅಪವಾದಾಬಾದಿನಲ್ಲಿ ಎಲ್ಲಿಸ್ ಸೇತುವೆಯ ಪ್ರದೇಶದಲ್ಲಿನ ಒಂದು ಮನೆಯಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಅಪ್ಪಣೆ ಇಲ್ಲದೆ ಶೇಖರಿಸಿದ್ದ 70 ಮಣ ಇಪ್ಪಲನ್ನು ಪೋಲೀಸಿನವರು ವಶಪಡಿಸಿಕೊಂಡಿರುವರು.

**ರಾಯಭಾರಿ ಮೇಲೆ ನಿಬರ್ಂಧ**—ಚಿಲಿಯದಲ್ಲಿರುವ ಜರ್ಮನ್ ರಾಯಭಾರಿಯ ತನ್ನ ಒಂಗಲೆಯಿಂದ ಹೊರಗೆ ಒರಕೂಡದೆಂದು ಆಜ್ಞೆಯಾಗಿದೆ. ಟೋಕಿಯೋದಲ್ಲಿ ಚಿಲ್ಲೀ ರಾಯಭಾರಿಗೆ ತೊಂದರೆ ಕೊಟ್ಟಿದ್ದಕ್ಕಾಗಿ ಹೀಗೆಮಾಡಲಾಗಿದೆಯೆಂದು ತಿಳಿಯಬರುತ್ತದೆ.

### ಜೊಸಜೊಸ ಸುದ್ದಿ

ಹ್ಯಾಂಬರ್ಗ್ ಮೇಲೆ ಮಿತ್ರಪಂಡಲಿ ವಿಮಾನಗಳು ಧಾಳಿ ದಡೆಸಿ ಭೀಕರ ಅಗ್ನಿಯುತ್ಪಾದಕವನ್ನು ಮಾಡಿವೆ

ಟೋಕಿಯೋ ಮೇಲೆ ಧಾಳಿ ನಡೆಸ ಸಾಗುವುದೆಂದು ಕರ್ಡಲ್ ನಾಕ್ಸ್‌ರವರು ಅಭಿಪ್ರಾಯಪಟ್ಟಿರುವರು.

ಜುರಾವನ್ನು ಬ್ರಿಟಿಷ್ 8 ನೇ ಸೈಯು ವಶಪಡಿಸಿಕೊಂಡಿದೆ.

ಸಿಸಲಿಯಲ್ಲಿರುವ ಮಸನಿಯನ್ನು ಆರ್. ಎ. ಎಫ್. ನವರು ಧಾಳಿಮಾಡಿರುವರು. ಪೆಚ್ಚು ನಷ್ಟವಾಗಿದೆಯೆಂದು ಇಟಲಿಯರೇ ಒಪ್ಪಿರುತ್ತಾತೆ

ಬೊಂಬಾಯಿನಲ್ಲಿ ಆಹಾರ ಪದಾರ್ಥಗಳು ಡಿಸೆಂಬರ್‌ಗಿಂತ ಈಗ 15 ಪಾಯಿಂಟ್ ಹೆಚ್ಚಿದೆ

### ರಾಣಿಯರ ಕೊಲೆ

ಪೆಸಿಫಿಕ್ ಸಾಗರದ ಒಂದು ದ್ವೀಪದಲ್ಲಿ ಒಬ್ಬ ರಾಜ ಅವನ ದ್ವೇಷಿಯಾದ ಮತ್ತೊಂದು ದ್ವೀಪದ ರಾಜನು ಇವನ ಹೆಂಡತಿಯನ್ನು ಕೊಂದು ಔತಣಮಾಡಿಕೊಂಡನು. ಇದನ್ನು ನೋಡಿ ನೊಂದ ರಾಜನು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳ ಅತನ ಹತ್ತು ಮಂದಿ ಹೆಂಡರನ್ನು ಕೊಂದು ಭಾರಿ ಔತಣ ನಡೆಸಿದನು.

Founded 1917 ಸತ್ಯವಾದಿ Regd No. M 1299

SATYAVADI

ಸಂಪುಟ 2 ಸಂಖ್ಯೆ 95 ] ಬುಧವಾರ 3—2—1943 [ ಬಿಡಿಪ್ರತಿ 1 ಕ್ಕೆ

## ಹಿಟ್ಲರ್ ಕುತಂತ್ರಕ್ಕೆ ಕೈಹಾಕುವನೇ?

ಜರ್ಮನರ ಶಕ್ತಿಯು ವಿಷಯದಲ್ಲಿ ಸಂದೇಹವಿಲ್ಲವಾದರೂ, ರಷ್ಯನರ ಮತ್ತು ಬ್ರಿಟಿಷರ ಮನಸ್ಸ್ಥಿತಿಯನ್ನು ತಡೆಯಲು ಅವರಿಂದ ಸಾಧ್ಯವಾಗದೇ ಇರುವುದು ಹಿಟ್ಲರಿಗೆ ತಲೆನೋವನ್ನುಂಟುಮಾಡದೇ ಇರುವುದಿಲ್ಲ. ಅವನು ರಷ್ಯಾದೊಡನೆ ಸಂಧಿಮಾಡಿಕೊಳ್ಳಲು ಯತ್ನಿಸುವನು ; ಆದರೆ ರಷ್ಯಾ ಜಗ್ಗುವುದಿಲ್ಲ. ಆಗ ಅವನು ಮನಸ್ಸು ಬೇರೆ ಚಾಲೋಕಿನ ಕಡೆಗೆ ಎಳೆಯಲ್ಪಡುವುದು. ಮಿತ್ರಮಂಡಲಿಯಲ್ಲಿ ವಿಭಜನೆ ಮಾಡುವ ಕುತಂತ್ರ ಕಾರ್ಯವನ್ನು ಕೈಕೊಳ್ಳಬಹುದು. ಎಂದು ಡೇಲಿ ಮೇಲ್ ಪತ್ರಿಕೆಯ ರಾಜಕೀಯ ಬಾತ್ಮಿದಾರರು ಅಭಿಪ್ರಾಯಪಟ್ಟಿದ್ದಾರೆ.

ಮದರಾಸ್ ಕಾರ್ಪೊರೇಷ್ ಕಟ್ಟಡಗಳ ಮೇಲೆ ಕಾಂಗ್ರೆಸ್ಸಿನ ಬಾವುಟ ಹಾರಿಸುವುದು ಪ್ರತಿಬಂಧಿಸಲಾಗಿದೆ.

ರಷ್ಯಾ ಸೈನ್ಯವು ಫಿನ್ ರೇವುಸಟ್ಟಣ ಪೆಟ್ಸಾಮೋಗೆ ಬಂದಿರುವುದಾಗಿ ಅಲ್ಲಿನ ರೆಡ್ಸ್ ನತ್ತು ಮೊರಾಕೋ ಸುದ್ದಿ.

ಜರ್ಮನರು ಕಾಕಸಸ್ ಕಡೆಯಿಂದ ರೋಸ್ಟಾವ್ ಕಡೆ ಓಡುತ್ತಿರುವರು!

ಜಪಾನು ರಷ್ಯಾದೊಡನೆ ಯುದ್ಧಮಾಡುವ ಇಚ್ಛೆಯುಳ್ಳದ್ದಾಗಿಲ್ಲವಂತೆ !

ಅಮೇರಿಕಾ ವಿಮಾನಗಳು ರಂಗೂನ್ ಮೇಲೆ ಧಾಳಿ ನಡೆಸಿದವು.

### ಬಂಗಾಳ ಬಿರುಗಾಳಿ ಆಸಾಮುತ

ಈಚೆಗಾದ ಬಂಗಾಳಾದ ಬಿರುಗಾಳಿ ಅಸಾಮುತಕ್ಕೆ ಸಿಕ್ಕಿದ ಪ್ರದೇಶವು ಇನ್ನೂ ಪೂರ್ವಸ್ಥಿತಿಗೆ ಬಂದಿಲ್ಲ. ಮೂರು ತಿಂಗಳಾಯಿತು. ಎಲ್ಲಿ ನೋಡಿದರೂ ಮೂಳೆಗಳ ರಾಶಿರಾಶಿಗಳು. ನೀರು ನಿಂತ ಕಡೆಗಳಲ್ಲೆಲ್ಲಿಗಿಡಗಳೂ, ಮರಗಳೂ, ತೊಲೆಗಳೂ ಮನೆಯ ಹೊಳೆಗಳೂ, ಜಾನುವಾರುಗಳ ಕೊಂಬುಗಳೂ ಮನುಷ್ಯರ ಮೂಳೆಗಳೂ. ಕೊಚ್ಚಿಕೊಂಡು ಬಂದ ಎಲುಬುಗಳೂ ಬಿದ್ದಿವೆ. ಅರ್ಧರ್ಧ ಹೊತುಹೋಗಿರುವ ಪ್ರಾಣಿಗಳನ್ನು ನೋಡಬಹುದು ಮರಳಿನಲ್ಲಿ ಹೂತುಹೋದವರು ಎಷ್ಟೋ ಮಂದಿ. ಆ ಸ್ಥಳದಲ್ಲಿ ಕಾಲಿಡಲು ಆಗುವುದಿಲ್ಲ, ದುರ್ಗಂಧಮಯವಾಗಿದೆ. ನಾಯಿನರಿಗಳು ಓಡಾಡುತ್ತಿರುವುದನ್ನೂ. ಹದ್ದುಗಳು ಗಿಡದ ಮೇಲೆ ಕೂತಿರುವುದನ್ನೂ ನೋಡಬಹುದು. ಈ ಸ್ಥಳವು 1943 ರಲ್ಲಿ ಮುಂಚಿನ ಸ್ಥಿತಿಗೆ ಬರುತ್ತದೆಯೋ ಏನೋ ?

### ಚಂಡುಗಳ ಶೇಖರಣೆ

ರಬ್ಬರ್ ಅಭಾವನೆಂದೂ, ಎಲ್ಲರೂ ಕೈಲಾದಷ್ಟು ರಬ್ಬರ್ ಶೇಖರಿಸಬೇಕೆಂದೂ ಅಮೇರಿಕಾ ಸಂಯುಕ್ತ ಸಂಸ್ಥಾನದವರು ಮೊದಲಾತೆ ಪ್ರಾರ್ಥಿಸಿದ್ದಕ್ಕೋಸ್ಕರ ಒಬ್ಬ ಪೋಲೀಸ್ ಅಧಿಕಾರಿಯು 650 ರಬ್ಬರ್ ಚಂಡುಗಳನ್ನು ಶೇಖರಿಸಿ ಸರ್ಕಾರಕ್ಕೆ ಕೊಟ್ಟಿನು.

### ಜೊಸಜೊಸ ಸುದ್ದಿ

ಸಿಲ್‌ಹಟ್ಟಿನಲ್ಲಿ ಕಾಗದದ ಅಭಾವದಿಂದ ಸ್ಕೂಲಿಂಗಳಲ್ಲಿ ಸ್ಲೇಟುಗಳನ್ನೂ, ಲಗ್ನಪತ್ರಿಕೆಗೆ ಬಾಳೇಎಲೆಯನ್ನೂ ಉಪಯೋಗಿಸುತ್ತಿರುವರು.

6 ಸಾವಿರ ರೂಪಾಯಿ ಕೊಟ್ಟು, ವಿ.ಪಿ ತೆಗೆದುಕೊಂಡು ರೈಲಿನಿಂದ ಪಡೆದ ಮೂರು ಪೆಟ್ಟಿಗೆಯನ್ನು ಒಡೆದಾಗ ಅಪ್ಪಗಳಲ್ಲಿ ದೀಪದ ಕಡ್ಡಿ ಬದಲು ಇಟ್ಟಿಗೆ ಇದ್ದಿತಂತೆ ! ದಾರುನಲ್ಲಿಯ ಸುದ್ದಿಯಿದು

ಚೈನಾಕ್ಕೂ ಅಮೇರಿಕಾಕ್ಕೂ ಕರಾರು ನಡೆದ ನಿಮಿತ್ತ ಚೈನಾದಲ್ಲಿ ಫೆಬ್ರವರಿ 5, 6 7 ಈ ಮೂರು ದಿವಸ ಎಲ್ಲರಿಗೂ ರಜ : ಯುದ್ಧಕಾರ್ಯದಲ್ಲಿ ಇಂದಿನವರೆಗೆ ಒಟ್ಟು ದಿವಸ ಮಾತ್ರ ರಜ !

ಶತ್ರುಗಳ ದೇಶದಲ್ಲಿ ನಿಂತಿರುವ 32 ಪತ್ರಿಕಾರಿಗಳ ಸಂಸಾರಗಳಿಗೆ ಸಿಂಧ್ ಸರಕಾರದವರು ತಿಂಗಳಿಗೆ ರೂ 8000 ಕೊಡುತ್ತಿರುವರು.

ಜನರಲ್ ಬೆರೋರವರು ಮೂರುಲಕ್ಷ ಸೈನ್ಯವನ್ನು ಜಪಾನಿಯಿಸುವರಂತೆ. ಅದಕ್ಕೆ ಬೇಕಾದ ವಸ್ತ್ರ, ಗುಂಡು, ಒಟ್ಟಿಗಳನ್ನು ಮಿ || ರೂಸ್‌ವೆಲ್ಟರು ಕೊಡುವರಂತೆ.

ಬರ್ಮನರು ಸಂಪೂರ್ಣ ಸೈನ್ಯ ಜಪಾನಿಮಾಣಿ ಕಾರ್ಯ ನಡೆಸಲು ಹವಣಿಸುತ್ತಿರುವರು.

## ವಿವಿಧ ವಿಷಯ

ಜರ್ಮನಿಯಲ್ಲಿ ಇನ್ನು ಮುಂದೆ ಶೇಕಡ ಇಷ್ಟರಂತೆ ವರ್ತಮಾನ ಪತ್ರಿಕೆಗಳನ್ನು ಮುದ್ರಿಸಬೇಕೆಂದು ಆಜ್ಞೆಯಾಗಿದೆ.

ಬರ್ಲಿನ್‌ನಲ್ಲಿ ಇನ್ನು ವೆ ಎಂದೆ ಹೋಟಲುಗಳನ್ನು ಯುದ್ಧದ ಕಾರ್ಖಾನೆಗಳನ್ನಾಗಿ ಮಾಡುವರು. ಜರ್ಮನಿಯಲ್ಲಿದ್ದ ಸೀವಾಯಿಗಳನ್ನು ರಣರಂಗಕ್ಕೆ ಕಳುಹಿಸುತ್ತಿರುವರು,

ಉತ್ತರ ಆಫ್ರಿಕಾದಲ್ಲಿ ಮಿ || ರೂಸ್‌ವೆಲ್ಟರೂ ಚರ್ಚಿಲ್ಲರೂ ಆದಿಯಾಗಿ ಸೇರಿ ಚರ್ಚೆ ನಡೆಸಿ, ಮಿ || ರೂಸ್‌ವೆಲ್ಟರು ಅಮೇರಿಕಾಕ್ಕೆ ಹಿಂತಿರುಗಿದಮೇಲೆ. ಮಿ || ಚರ್ಚಿಲ್ಲರು ತುರ್ಕಿಗೆ ಬಂದು ಇದುವರೆಗೂ ಅಲ್ಲೇ ಇದ್ದು ಪ್ರೆಸಿಡೆಂಟರ ಸಂಗಡ ಮುಂದೆ ಯಾವ ರೀತಿ ನಡೆಸುವೇಕು ಮುಂತಾದ ವಿಷಯಗಳನ್ನು ಚರ್ಚೆಮಾಡಿ ಈಗ ಕೈರೋವಿಗೆ ಹಿಂತಿರುಗಿರುತ್ತಾರೆ.

ಹಿಂದೂಸ್ಥಾನದ ಪಶ್ಚಿಮ ತೀರದಲ್ಲಿ ಶತ್ರುಬಾಧೆ ತಪ್ಪಿದ್ದರಿಂದ ಎ.ಆರ್.ಪಿ. ಇಲಾಖೆಯ ಖರ್ಚನ್ನು ಕಡಮೆ ಮಾಡಬೇಕೆಂದು ಸರ್ಕಾರಿ ಆಜ್ಞೆಯಾಗಿದೆ.

### ಭಂಗಾರ ಬೆಳ್ಳಿ ಧಾರಣೆ

| | | |
|---|---|---|
| ಬಂಗಾರ | ತೋಲ | ರೂ. 65—4—0 |
| ಬೆಳ್ಳಿ | ,, | 1—9—6 |

## ವಿದ್ಯಾರ್ಥಿ ಸಂಸ್ಥೆ

ವಿದ್ಯಾರ್ಥಿ ಸಮಿತಿಯ ಸದಸ್ಯರಾದ ಶ್ರೀ ಶಾರದಾ ಪ್ರಸಾದ್ ಮುಂತಾದವರು ಹೇಳುವುದೇನೆಂದರೆ — "ನಾಡಿನ ನಿಯತ್ಕಾಲಿಕ ವಿದ್ಯಾರ್ಥಿ ಸಮೂಹಕ್ಕೆ ಇಂದು ಬಹಳ ಗುರುತರವಾದ ಜವಾಬ್ದಾರಿ ಒದಗಿಬಂದಿದೆ. ದೇಶಕ್ಕೆ ಸಲ್ಲಿಸಬೇಕಾದ ಕರ್ತವ್ಯವು ಅಗಾಧವಾಗಿದೆ. ಅದ್ದರಿಂದ ನಗರ ವಿದ್ಯಾರ್ಥಿಗಳನ್ನು ವ್ಯವಸ್ಥಿತ ರೀತಿಯಲ್ಲಿ ಶಿಕ್ಷಿತರಾಗಿ ನಡೆದುಕೊಳ್ಳುವದಕ್ಕೆ ಈ ಸಂಘವು ಸ್ಥಾಪಿತವಾಗಿದೆ ಎಂದು ಘೋಷಿಸುತ್ತಾರೆ. ಮುಖ್ಯ ಉದ್ದೇಶವು ಕ್ರಮೇಣ ಇತರ ವಿದ್ಯಾಸಂಸ್ಥೆಗಳ ಸಹಕಾರ, ಭಾರತ ಮತ್ತು ಜಗತ್ತಿನ ವಿದ್ಯಾರ್ಥಿ ಸಂಸ್ಥೆಗಳಲ್ಲೂ ಸೌಹಾರ್ದ ಸಂಗನು ಬಂಧಗಳನ್ನು ಅಭಿವೃದ್ಧಿ ಪಡಿಸುವುದು. ಕೋಮುವಾರು ಸ್ವಸ್ಥದೃಷ್ಟಿಯನ್ನು ಅಡಗಿಸಿ ನಡೆಯುವ ವಿಶಾಲ ಮನೋಭಾವ ಮುಂತಾದ ಉದ್ದೇಶವೆಂದು ತಿಳಿಸಿರುತ್ತಾರೆ. (ಕ್ಲ. ಸಂ.)

---

ಜಪಾನು ಕೆಲ ದಿವಸಗಳ ಹಿಂದೆ ಪಶ್ಚಿಮ ಚಿಯಾಂಗ್ ಮೇಲೆ ವಿಮಾನಗಳ ಮೂಲಕ ಪ್ಲೇಗಿನ ಸೋಂಕಿನಿಂದ ಕೂಡಿದ ಧಾನ್ಯವನ್ನೂ, ಕ್ರಿಮಿಗಳನ್ನೂ ಹಾಕಿದ್ದರ ಫಲವಾಗಿ ಅನೇಕ ಜನಗಳು ಆ ಸೋಂಕಿನ ವಶವಾಗಿವೆ. ಜನರಲ್ಲೂ ಕೊಂದರೆಗೊಳಗಾಗಿದ್ದಾರೆ.

# ಯುದ್ಧದ ಖರ್ಚು

(ನಿನ್ನೆ ಸಂಚಿಕೆಯಿಂದ ಮುಂದುವರಿದುದು)

ಹಿಂದಿನ ಯುದ್ಧದಲ್ಲಿ ವಿಮಾನ ಧಾಳಿಯು ಇರಲೇ ಇಲ್ಲ. ಆದರೂ ಎಲ್ಲಾ ಜನಾಂಗಗಳ ಒಟ್ಟು ವಿಮಾನಗಳು 10 ಸಾವಿರಕ್ಕೆ ಮಿಗಾರಿರಲಿಲ್ಲ. ಆಗ ಫ್ರಾನ್ಸಿಗೆ 3400, ಜರ್ಮನಿಗೆ 2800, ಇಂಗ್ಲೆಂಡಿಗೆ 1800, ಇಟಲಿಗೆ 800, ಅಮೇರಿಕಾ 750. ಈ ಪ್ರಕಾರ ಇಟ್ಟುಕೊಂಡಿದ್ದರು. ಈಗ ನೋಡಿ ಎಷ್ಟು ಹೆಚ್ಚಾಗಿವೆ. ಹಿಂದಿನ ಯುದ್ಧಕ್ಕೆ ಸುಮಾರು 420 ಲಕ್ಷ ಟನ್ ಹಡಗುಗಳು ಇದ್ದು ಯುದ್ಧ ಮುಗಿದ ಮೇಲೆ 400 ಲಕ್ಷ ಟನ್‌ಗೆ ಇಳಿಯಿತು. ಅಮೇರಿಕಾದವರಿಗೆ 4 ಲಕ್ಷ ಟನ್ ನಷ್ಟವಾಯಿತು. ಇವರು 18 ಲಕ್ಷದಿಂದ 58 ಲಕ್ಷ ಟನ್ ನಷ್ಟು ಹಡಗುಗಳನ್ನು ಜೀಗಜೀಗ ಕಟ್ಟಿ ವಿಶ್ವವಾಣಿಜ್ಯವನ್ನು ಅಭಿವೃದ್ಧಿ ಮಾಡಿಕೊಂಡರು, ತುಂಬಾ ನಷ್ಟಪಟ್ಟವರು ಇಂಗ್ಲೀಷಿನವರು. ಇವರ 78 ಲಕ್ಷ ಟನ್‌ನಷ್ಟು ಹಡಗನ್ನು ಜರ್ಮನಿಯ ಸಬ್‌ಮೆರಿನ್‌ಗಳು ನಾಶಕಾಲಕ್ಕೆ ಕಳುಹಿಸಿದವು. ಯುದ್ಧವು ನಷ್ಟದಲ್ಲ ಎಂದು ಮನೆಯಲ್ಲಿ ಬೆಚ್ಚಗೆ ಕೂತಿದ್ದ ನಾರ್ವೇ ದೇಶದ ಹಡಗುಗಳು ಹನ್ನೆರಡು ಲಕ್ಷ ಟನ್‌ನಷ್ಟು ನಾಶವಾಯಿತು. ಫ್ರಾನ್‌ದೇಶದ ನಷ್ಟ 9 ಲಕ್ಷ ಟನ್, ಜರ್ಮನಿಯ ನಷ್ಟವಾದರೊ ಬಹಳ ಸ್ವಲ್ಪ ಅಂದರೆ 187 ಸಾವಿರ ಟನ್. ಇದಕ್ಕೆ ಕಾರಣ ಯುದ್ಧ ಪ್ರಾರಂಭವಾದಾಗ ಜರ್ಮನಿ ಹಡಗುಗಳು ಸಮುದ್ರದ ಮೇಲೆ ಓಡಾಡುತ್ತಿರಲಿಲ್ಲ.

ಯುದ್ಧ ಕೂಡಿದಾಗ ಜರ್ಮನಿಯ ಸಾಲ ರೂ.3360,000,000 ; ಮುಗಿದಾಗ ರೂ. 13650, 000000 : ಪ್ರಾರಂಭದಲ್ಲಿ ಇಂಗ್ಲೆಂಡಿಗೆ ರೂ 980000000೦ ಯುದ್ಧ ಮುಗಿದಾಗ ರೂ. 1190 000000000 ಕ್ಕೆ ಏರಿತು. ಯುದ್ಧಕಾಲದಲ್ಲಿ ವಿನಿಮಯ ಮಾಡುತ್ತಿದ್ದರಿಂದ ಫ್ರಾನ್ಸಿನ ಸಾಲವು ಒಂದಕ್ಕೆ ನಾಲ್ಕರಷ್ಟು ಮಾತ್ರ ಹೆಚ್ಚಿತು. ಅಮೇರಿಕಾದ ಸಾಲವು ಒಂದಕ್ಕೆ 25 ರಂತೆ ಹೆಚ್ಚಿತು.

ಹಿಂದಿನ ಯುದ್ಧದಲ್ಲಿ 85 ಲಕ್ಷ ಜನರು ಸತ್ತರು. 77 ಲಕ್ಷ ಜನ ಸತ್ತಿಲ್ಲ. ಅವರಲ್ಲಿ 17 ಲಕ್ಷ ಜರ್ಮನಿಯವರು ಸತ್ತರು ರಷ್ಯಾದವರು 17 ಲಕ್ಷ ಸತ್ತರೆಂದು ಹೇಳುವರು. ಆದರೆ 25 ಲಕ್ಷ ರಷ್ಯನರು ಸತ್ತೆಯಿಲ್ಲವಂತೆ ಫ್ರಾನ್ಸಿಗೆ 13 ಲಕ್ಷ, ಇಂಗ್ಲೆಂಡಿಗೆ 9 ಲಕ್ಷ, ಆಸ್ಟ್ರೇಲಿಯಾಕ್ಕೆ 12 ಲಕ್ಷ, ಈಪ್ರಕಾರ ಸತ್ತಿರುವರು. ರಣರಂಗಕ್ಕೆ ಧುಮುಕಿದ ವೀರರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಸತ್ತಿರುವರು.


ಅಪೆರ

ಕುನ್ವಾರ್ ಬಾಪ್

ಮಂಗಳೂರು ಗಣಪತಿ, ಸುವರ್ಣಾ ಸ್ಪೆಷಲ್, ಗಜಾನನ ಬೀಡಿಗಳನ್ನೇ ಉಪಯೋಗಿಸಿ

ಪಿ. ಮಂಜಪ್ಪ, ಬೀಡಿ ಮಾರ್ಚೆಂಟ್
ಹಳೇ ಅಗ್ರಹಾರ, ಮೈಸೂರು.

ಉಡುಪಿ ಆನಂದ ಭವನಂ

ರಾಜಧಾನಿಯ ಅತ್ಯುತ್ತಮವಾದ

ಕಾಫೀ ಕ್ಲಬ್

ಸ್ಟೇಷನ್ ರೋಡ್ ಮೈಸೂರು.

ನಿಮ್ಮ ಊರಿನ ಮೆಚ್ಚಿನ ಚಲನ ಚಿತ್ರ ಮಂದಿರಗಳಲ್ಲಿ ಎದುರುನೋಡಿ

— ಹೆಚ್ ಆರ್. ಜಿ. ಸಿ. ಯವರ —

ಶ್ರೀ ಪಿಕ್ಚರ್ಸ್

ಗಾಂಧಿಸ್ಕ್ವೇರ್, ಮೈಸೂರು ಇವರ ಸಂಗೀತರತ್ನ ಅಸ್ಥಾನ ವಿದ್ವಾನ್ ಟಿ. ಚಾಂಡಯ್ಯನವರು, ಕಲ್ಚರ್ಡ್ ಕಮೆಡಿಯನ್ ಕೆ ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ or (VIOLINIST)



Edited, Printed & pnblished by M. S. Krishna Rao, at the Satyavadi Press. Chamaraja Agrahar, Mysore.


## ಕೆನಡಾ ವಿಮಾನ ದಳ

ಈವರ್ಷ ಕೆನಡಾದವರು ವಿಮಾನದಳವನ್ನು 30 ರಿಂದ 38 ಕ್ಕೆ ಏರಿಸಿರುವರು.

## ಸ್ಟಾಲಿಗ್ರಾಡ್

ಸ್ಟಾಲಿಗ್ರಾಡಿನಲ್ಲಿ ಸ್ರಜೆಗಳು ಹಿಂತಿರುಗಿ ಮನೆಗಳಿಗೆ ಬರುತ್ತಿದ್ದಾರೆ. ತಮ್ಮ ನಂಟರಿಷ್ಟರ ಶವಗಳನ್ನು ತೆಗೆಯುತ್ತಿದ್ದಾರೆ. ಓಡಾಡಲು ಸೆಲ್ಡ್‌ಜ್‌ಗಳನ್ನು ಉಪಯೋಗಿಸುತ್ತಿದ್ದಾರೆ.

## ಸಂಕೋಷವೇ ಸರಿ

ಕರ್ಕಿ ವರ್ತಮಾನ ಪತ್ರಿಕೆಯವರು ಈಗ ಇಂಡಿಯಾದಲ್ಲಿ ಸಂಚರಿಸುತ್ತಿರುವರಷ್ಟೆ. ಅವರು ಈಗ ಕಲ್ಕತ್ತಾಕ್ಕೆ ಬಂದಿದ್ದರು : ಪುರಸಿವಾಸಿಗಳು ಸತ್ಕರಿಸಿದರು. ಮಿ || ಚರ್ಚಿಲ್ಲರು ಕುರ್ಕಿಗೆ ಹೋಗಿ ಪ್ರೆಸಿಡೆಂಟರ ಸಂಗಡ ಮಾತುಕತೆ ನಡೆಸಿದ್ದನ್ನು ಕೇಳಿ ಇವರು ಬಹಳ ಸಂತೋಷಗೊಂಡರು.

## ಕಂಪಾಜಿಟರು ಬೇಕಾಗಿದ್ದಾರೆ

ಪ್ರತಿದಿನ ಮಧ್ಯಾಹ್ನ ಕೆಲವು ಗಂಟೆಗಳ ಕೆಲಸ ಮಾಡಲ್ಲ ಇಬ್ಬರು ಕಂಪಾಜಿಟರುಗಳು ಕೂಡಲೇ ಬೇಕಾಗಿದ್ದಾರೆ ಹೆಚ್ಚು ವಿಷಯಗಳನ್ನು ಆಫೀಸಿನಲ್ಲಿ ವಿಚಾರಿಸಿ ತಿಳಿಯಬಹುದು.

ಮ್ಯಾನೇಜರ್, ಸತ್ಯವಾದಿ ಆಫೀಸ್
ಮೈಸೂರು

## ಬಿಕನೀರ್ ಮಹಾರಾಜರ ನಿಧನ

ನಿನ್ನೆ ಜೆಕ್ಕೊಸ್ಲೊವಾಕಿಯನಲ್ಲಿ ಬಿಕನೀರ್ ಮಹಾರಾಜರು ಕಾಲವಾದರು. ಅವರ ಕಳೇಬರವನ್ನು ವಿಮಾನದಲ್ಲಿ ಬಿಕನೀರಿಗೆ ಕೊಂಡೊಯ್ದರು. ವೈಸರಾಯರು ಗೌರ್ನರರು, ಮಂತ್ರಿಗಳಾಗಿ ಎಲ್ಲಾ ಅಧಿಕಾರಿಗಳೂ. ಪುರಪ್ರಮುಖರೂ ಅವರ ಬಂಗಲೆಗೆ ಹೋಗಿ, ತಮ್ಮ ವ್ಯಸನವನ್ನು ವ್ಯಕ್ತಪಡಿಸಿದರು.

ಇದಕ್ಕಾಗಿ ಈ ದಿವಸ ಮೈಸೂರು ಬೇಗಳೂರಿನಲ್ಲಿ ರಜಾ.

## ಕೋಲಾರದ ಬಂಗಾರದ ಗಣಿ

ಇಂಡಿಯಾದಲ್ಲಿ ಉತ್ಪತ್ತಿಯಾದ ಬಂಗಾರದಲ್ಲಿ ಕೋಲಾರದ ಬಂಗಾರವು ಶೇಕಡ 99 ರಷ್ಟು. 1882 ರಿಂದ ಈವರೆವಿಗೆ 300 ಲಕ್ಷ ಔನ್ಸ್ ಬಂಗಾರವು ಉತ್ಪತ್ತಿಯಾಗಿದೆ. ಇದು 128 ಕೋಟಿ ರೂಪಾಯಿಯಾಗುತ್ತದೆ. ಕೋಲಾರದಲ್ಲಿ ವರ್ಷಕ್ಕೆ ನಿರಡು ಲಕ್ಷ ಔನ್ಸ್ ಭಂಗಾರವು ಸಿಗುವುದು.

## ಟೆನಿಷಿಯಾದಲ್ಲಿ ಏನಾಗುವುದು ?

ಅಕ್ಷಿಸ್ಸರ ದಳವು ಟುನಿಷಿಯಾದಲ್ಲಿ ಒಹಳ ಭದ್ರವಾದ ಸ್ಥಳಗಳಲ್ಲಿದೆ. ಒಮ್ಮೆ ಸಿಯರ ತೋಪುಗಳು 18 ಅಡಿ ಆಳದಲ್ಲಿ ಹೂಳಲ್ಪಟ್ಟಿವೆ. ಗುಂಡಿನ ಬಾಯಿ 88 ಮಿಲಿಮಿಟರ್. ದೇಶವು ಹಳ್ಳಗುಡ್ಡಪ್ರದೇಶ. ಮಿತ್ರರಾಷ್ಟ್ರಗಳವರು ವಿನ ದಿನಕ್ಕೆ ಒಲಗೂಗೃತ್ತಿರುವರು. ಕೆಲವು ತಿಂಗಳುಗಳಲ್ಲಿ ಇಲ್ಲವೇ ಕೆಲವು ವಾರಗಳಲ್ಲೇ ಭಾರಿ ಕದನವಾಗಬಹುದು. ಯಾರು ಗೆಲ್ಲುತ್ತಾರೆ ಎನ್ನುವದು ನನಗೆ ಗೊತ್ತು, ಎಂದು ಚರ್ಚಿಲ್ಲರು ಹೇಳುತ್ತಾರೆ.

## ಭಾರತದ ಸಿಪಾಯಿಗಳು ನಿಪುಣರು

ಈಗ ಮಿ || ಫಿಲಿಪ್ಸರು ಲಾಹೋರಿಗೆಬಂದಿರುತ್ತಾರೆ ; ಹಿಂದೂಸ್ಥಾನದ ಸಿಪಾಯಿಗಳು ರಣರಂಗದಲ್ಲಿ ಯುದ್ಧಮಾಡಿದ್ದನ್ನು ನಾನು ನೋಡಿದೆ, ಅವರೆಲ್ಲಾ ಯುದ್ಧನಿಪುಣರಲ್ಲಿ ನಿಪುಣರು. ಎಂದು ಅವರು ಹೇಳಿರುತ್ತಾರೆ.


For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

ಅಪೆರ

ಕುನ್ವಾರ್ ಬಾಪ್

ಮಂಗಳೂರು ಗಣಪತಿ, ಸುವರ್ಣಾ ಸ್ಪೆಷಲ್, ಗಜಾನನ ಬೀಡಿಗಳನ್ನೇ ಉಪಯೋಗಿಸಿ

ಪಿ. ಮಂಜಪ್ಪ, ಬೀಡಿ ಮಾರ್ಚೆಂಟ್
ಹಳೇ ಅಗ್ರಹಾರ, ಮೈಸೂರು.

ಶ್ರೀದೇವಿ ಆರ್ಟ್ಸ್

ಆಂಯಮಾಡಿದ ಬೋರ್ಡುಗಳು ಬರೆಯಲ್ಪಡುತ್ತವೆ, ಎಲ್ಲಾ ತರಹದ ಚಿತ್ರಕೆಲಸಗಳೂ ಮಾಡಲ್ಪಡುತ್ತವೆ ಸುಲಭ ದರಗಳು.
348 ಚಾಮರಾಜರೋಡ್, ಮೈಸೂರು



Edited, Printed & pnblished by M. S. Krishna Rao, at the Satyavadi Press. Chamaraja Agrahar, Mysore.


"ಸತ್ಯವಾದಿ" ಚಂದಾದಾರರಾಗಿರಿ.